ಆಶ್ರಯ ಮನೆಗಳನ್ನು ಹಸ್ತಾಂತರ

1384(1722); ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ)

ಅ) 2003–04ನೇ ಸಾಲಿನಲ್ಲಿ ಹುಬ್ಬಳ್ಳಿಯ ಬಿಡನಾಳ ಗ್ರಾಮದಲ್ಲಿ ಆಶ್ರಯ ಮನೆಗಳ ನಿರ್ಮಾಣ ಉದ್ದೇಶಕ್ಕಾಗಿ ಗದಗ ನಿರ್ಮಿತಿ ಕೇಂದ್ರಕ್ಕೆ ಎಷ್ಟು ಹಣ ಮುಂಗಡವಾಗಿ ಪಾವತಿಸಲಾಗಿತ್ತು;

ಆ) ಗದಗ ನಿರ್ಮಿತಿ ಕೇಂದ್ರವು ಆಶ್ರಯ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸದೇ ಇರಲು ಕಾರಣಗಳೇನು; ಆಶ್ರಯ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) 2003–04ನೇ ಸಾಲಿನ ನಗರ ಆಶ್ರಯ ಯೋಜನೆಯಡಿ ಬಿಡನಾಳ ಗ್ರಾಮದಲ್ಲಿ ಮನೆಗಳನ್ನು ನಿರ್ಮಿಸಲು ಗದಗ ನಿರ್ಮಿತಿ ಕೇಂದ್ರಕ್ಕೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವತಿಯಿಂದ ಫಲಾನುಭವಿಗಳ ವಂತಿಕೆಯ ಮೊತ್ತ ₹ 10.00 ಲಕ್ಷ ಮತ್ತು ಸರ್ಕಾರದ ಅನುದಾನ ₹ 22.00 ಲಕ್ಷಗಳು ಹೀಗೆ ಒಟ್ಟು 32.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಆ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವತಿಯಿಂದ ದಿನಾಂಕ:26.02.2005ರಲ್ಲಿ ಗದಗ ನಿರ್ಮಿತಿ ಕೇಂದ್ರಕ್ಕೆ ಬಿಡನಾಳ 2ನೇ ಹಂತದಲ್ಲಿ 160 ಮನೆಗಳನ್ನು ₹ 42,000/–ಗಳ ಘಟಕ ವೆಚ್ಚದಂತೆ ನಿರ್ಮಿಸಲು ಕಾಮಗಾರಿ ಆದೇಶ ನೀಡಲಾಗಿರುತ್ತದೆ. ದಿನಾಂಕ: 02.06.2007ರಂದು ಜರುಗಿದ ಆಶ್ರಯ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗದಗ ನಿರ್ಮಿತಿ ಕೇಂದ್ರಕ್ಕೆ ನೀಡಲಾಗಿದ್ದ ಗುರಿಯನ್ನು 70ಕ್ಕೆ ಮಿತಿಗೊಳಿಸಲಾಗಿರುತ್ತದೆ.

ಗದಗ ನಿರ್ಮಿತಿ ಕೇಂದ್ರವು ಸದರಿ ಯೋಜನೆಯಡಿಯಲ್ಲಿ 55 ಮನೆಗಳನ್ನು ಪೂರ್ಣಗೊಳಿಸಿ, ದಿನಾಂಕ:03.01.2008ರಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಪತ್ರ ಬರೆದು 55 ಮನೆಗಳನ್ನು ಹಸ್ತಾಂತರ ಪಡೆದುಕೊಳ್ಳಲು ಪತ್ರ ಬರೆದಿರುತ್ತಾರೆ. ಆದರೆ ಪಾಲಿಕೆಯಿಂದ ಇದೂವರೆಗೂ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ. ಈ ಬಗ್ಗೆ ಪರೀಶೀಲಿಸಿ ವರದಿ ನೀಡಲು ಕಾರ್ನಿಕ್, ಮೂರನೇ ತಾಂತ್ರಿಕ ಸಲಹೆಗಾರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹಾಗೂ ಗದಗ ನಿರ್ಮಿತಿ ಕೇಂದ್ರವನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ವರದಿಯಂತೆ ಮನೆಗಳನ್ನು ನಿರ್ಮಿಸಿ 6 ವರ್ಷ ಕಳೆದರೂ ಫಲಾನುಭವಿಗಳಿಗೆ ಹಸ್ತಾಂತರವಾಗದೇ ಇರುವುದರಿಂದ ಪೂರ್ಣಗೊಂಡ ಮನೆಗಳಲ್ಲಿ ಫ್ಲೋರಿಂಗ್, Partition work, ಕಿಟಕಿ, ಬಾಗಿಲುಗಳನ್ನು Damage ಮಾಡಲಾಗಿರುತ್ತದೆ. ಗದಗ ನಿರ್ಮಿತಿ ಕೇಂದ್ರದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಿಗೆ ಪೂರ್ಣಗೊಂಡಿರುವ ಮನೆಗಳಲ್ಲಿ ಪ್ರಸ್ತುತ ಇರುವ ಸಣ್ಣ ಪುಟ್ಟ ದೋಷಗಳನ್ನು ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ಮೂಲಕ ನಿವಾರಿಸಿ ಹಸ್ತಾಂತ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಮತ್ತು ಇನ್ನುಳಿದ 15 ಮನೆಗಳನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ವಸತಿ ಯೋಜನೆಗಳ ಪ್ರಗತಿ

1385(789); ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ)

ಅ) ನೂತನ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬೆಳಗಾವಿ ಜಿಲ್ಲೆಯಲ್ಲಿ ಇದುವರೆಗೆ ಸಾಧಿಸಿದ ಪ್ರಗತಿಯ ವಿವರ ಒದಗಿಸುವುದು:

ಆ) ಜಿಲ್ಲೆಯಲ್ಲಿ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳಾವುವು, ಅವುಗಳಿಗೆ ಮೀಸಲಿಟ್ಟ ಅನುದಾನವೆಷ್ಟು; (ಯೋಜನಾವಾರು ವಿವರ ಒದಗಿಸುವುದು)